# ವಿದ್ಯುಚ್ಛಕ್ತಿ ಲೋಕಪಾಲರು
## ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ, ಬೆಂಗಳೂರು ಇವರ ಮುಂದೆ.
**ನಂ:16 ಸಿ–1, ಮಿಲ್ಲರ್ ಟ್ಯಾಂಕ್ ಬೆಡ್ ಏರಿಯಾ, ವಸಂತ ನಗರ, ಬೆಂಗಳೂರು.**

**ಪ್ರಕರಣ ಸಂಖ್ಯೆ:ಓಎಂಬಿ/ಮೆ/ಜಿ–324/2019**
**ದಿನಾಂಕ: 05–07–2019**

**ಮೇಲ್ಮನವಿದಾರ,**
ಶ್ರೀ ಶರತ್ ಎಂ.ಎಲ್
ಮನೇಘಟ್ಟ,
ಅಂಚೆ: ಮಾಸೂರು, ತಾ: ಸಾಗರ,
ಶಿವಮೊಗ್ಗ ಜಿಲ್ಲೆ.

**ಪ್ರತಿವಾದಿಗಳು:**
1. ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)
ಕಾರ್ಯ ಮತ್ತು ಪಾಲನಾ ಸಾಗರ ಗ್ರಾಮಾಂತರ ಉಪವಿಭಾಗ,
ಮೆಸ್ಕಾಂ,
ಸಾಗರ–577401,
ಶಿವಮೊಗ್ಗ ಜಿಲ್ಲೆ.

2. ಅಧ್ಯಕ್ಷರು, ಸಿಜಿಆರ್‌ಎಫ್, ಅಧೀಕ್ಷಕ ಇಂಜಿನಿಯರ್(ವಿ.)
ಕಾ & ಪಾ ಶಿವಮೊಗ್ಗ ವೃತ್ತ, ಮೆಸ್ಕಾಂ,
ಶಿವಮೊಗ್ಗ.

1) ಪ್ರಸ್ತುತ ಪ್ರಕರಣದಲ್ಲಿ ಮೇಲ್ಮನವಿದಾರರಾದ ಶ್ರೀ ಶರತ್ ಎಂ.ಎಲ್, ಇವರು ಗ್ರಾಹಕರ ಕುಂದು ಕೊರತೆಗಳ ನಿವಾರಣಾ ವೇದಿಕೆ, ಸಿಜಿಆರ್‌ಎಫ್, ಶಿವಮೊಗ್ಗ ಜಿಲ್ಲೆ, ಶಿವಮೊಗ್ಗ ಇವರ ಪ್ರಕರಣ ಸಂಖ್ಯೆ: ಮವಿಸಕಂ/ಗ್ರಾ.ಕು.ಕೊ.ನಿ.ವೇ/08/11740–46 ರಲ್ಲಿ ದಿನಾಂಕ 05–02–2019 ರಂದು ಮಾಡಿರುವ ಆದೇಶವನ್ನು ಪ್ರಶ್ನಿಸಿ ಈ ಪ್ರಾಧಿಕಾರದ ಮುಂದೆ ದಿನಾಂಕ: 08–03–2019 ರಂದು ನಮೂನೆ–ಬಿ ದಲ್ಲಿ ಮೇಲ್ಮನವಿ ಅರ್ಜಿಯನ್ನು ಸಲ್ಲಿಸಿರುತ್ತಾರೆ.

2) ಪತ್ರ ಸಂಖ್ಯೆ ಓಎಂಬಿ/ಮೆ/ಜಿ–324/2019/ಡಿ–1224ದಿನಾಂಕ:19–03–2019 ರ ಮೂಲಕ ಮೇಲ್ಮನವಿದಾರರು ಹಾಗೂ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್, ಮೆಸ್ಕಾಂ, ಸಾಗರ ಉಪ ವಿಭಾಗ, ಸಾಗರ ತಾಲ್ಲೂಕು, ಶಿವಮೊಗ್ಗ ಪ್ರತಿವಾದಿ–1 ಇವರಿಗೆ ನೋಟೀಸ್ ನೀಡಿ KERC (CGRF & Ombudsman) Regulations 2004, ರ Regulation 20 (1)

ರ ಪ್ರಕಾರ ಉಭಯ ಪಕ್ಷದವರು ಸಂಧಾನದ ಮೂಲಕ ರಾಜಿ ಮಾಡಿಕೊಳ್ಳಲು ಇರುವ ಅವಕಾಶ, ಹಾಗೂ ಅದರ ಪ್ರಯೋಜನ ಪಡೆಯಲು ತಿಳಿಸುತ್ತಾ, ದಿನಾಂಕ 29-03-2019 ರಂದು ಬೆಳಿಗ್ಗೆ 11.30 ಘಂಟೆಗೆ ವಿದ್ಯುಚ್ಛಕ್ತಿ ಲೋಕಪಾಲರ ಕಛೇರಿಗೆ ವಿಚಾರಣೆಗೆ ಹಾಜರಾಗಲು ತಿಳಿಸಲಾಗಿದೆ.

3) ದಿನಾಂಕ:29-03-2019, 25-04-2019 ಹಾಗೂ 08-05-2019 ರಂದು ಪ್ರಕರಣದ ಕುರಿತು ವಿಚಾರಣೆ ನಡೆಸಲಾಯಿತು. ಮೇಲ್ಮನವಿ ಕುರಿತು ಪ್ರತಿವಾದಿ-1 ಇವರು ತಮ್ಮ ಲಿಖಿತ ಹೇಳಿಕೆಯನ್ನು ದಿನಾಂಕ 25-04-2019 ರಂದು ಸಲ್ಲಿಸಿರುತ್ತಾರೆ.

4) ಮೇಲ್ಮನವಿದಾರರು ಮೇಲ್ಮನವಿಯಲ್ಲಿ ತಿಳಿಸಿರುವಂತೆ ಪ್ರಕರಣದ ವಿವರಗಳು ಈ ಕೆಳಕಂಡಂತೆ ಇರುತ್ತವೆ.

a) ಮೇಲ್ಮನವಿದಾರರು ಮೇಲ್ಮನವಿ ದೂರಿನಲ್ಲಿ ಮೆಸ್ಕಾಂ ನಿಯಮಿತಕ್ಕೆ ಸೇರಿದ ವಿದ್ಯುತ್ ಸ್ಥಾವರ ಆರ್.ಆರ್.ಸಂಖ್ಯೆ: ಎಂಪಿ 37092 ವಿದ್ಯುತ್ ಸಂಪರ್ಕವನ್ನು ದಿನಾಂಕ 14-08-2014 ರಿಂದ ಪಡೆದುಕೊಂಡಿದ್ದು, ಇದರ ಸಲುವಾಗಿ ರೂ. 3,880/-ನ್ನು ಠೇವಣಿ ಪಾವತಿಸಿದ್ದು ಹಾಗೂ ರೂ. 2,394/- ಬೆಲೆಯ ಮಾಪಕವನ್ನು ಸ್ವತ: ಖರೀದಿಸಿರುತ್ತಾರೆ ಎಂದು ತಿಳಿಸಿರುತ್ತಾರೆ. ಸದರಿ ವಿದ್ಯುತ್ ಸಂಪರ್ಕವನ್ನು ಖಾಯಂ ರದ್ದುಗೊಳಿಸಲು ಕೋರಿ ದಿನಾಂಕ 24-10-2016ರಂದು ಮೆಸ್ಕಾಂಗೆ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಮೆಸ್ಕಾಂರವರು ದಿನಾಂಕ 17-10-2017 ರಂದು ವಿದ್ಯುತ್ ಸಂಪರ್ಕವನ್ನು ರದ್ದುಗೊಳಿಸಿರುತ್ತಾರೆ. ವಿದ್ಯುತ್ ಸಂಪರ್ಕ ರದ್ದುಗೊಳಿಸುವ ಮುನ್ನ ಅಂತಿಮ ಬಿಲ್ಲಿನ ಮೊತ್ತ ರೂ. 1,349/-ನ್ನು ದಿನಾಂಕ 17-07-2017ರಂದು ಮೇಲ್ಮನವಿದಾರರಿಂದ ಕಟ್ಟಿಸಿಕೊಂಡಿರುತ್ತಾರೆ. ಸದರಿ ಪಾವತಿಸಿದ ಹಣವನ್ನು (ಮಾಪಕದ ಬೆಲೆ-ರೂ 2394+ ಸಂಪರ್ಕ ಠೇವಣಿ-ರೂ. 3880/- + ಒಂದು ವರ್ಷದ ಶುಲ್ಕ ರೂ. 1,349/- ಒಟ್ಟು ರೂ. 7623/-)ನ್ನು ಸಂಪರ್ಕವನ್ನು ಶಾಶ್ವತವಾಗಿ ರದ್ದುಗೊಳಿಸಿದ ಮೇಲೆಯೂ ಮೆಸ್ಕಾಂರವರು ಪಾವತಿಸಿರುವುದಿಲ್ಲ. ಈ ಹಿನ್ನೆಲೆಯಲ್ಲಿ ಕೆಇಆರ್‌ಸಿ ನಿಯಮಗಳ ಅಡಿಯಲ್ಲಿ ದಿನಾಂಕ 26-09-2018ರಂದು ದೂರು ಅರ್ಜಿಯನ್ನು ಸಲ್ಲಿಸಿರುತ್ತಾರೆ, ಆದರೆ ಮೆಸ್ಕಾಂರವರು ಸದರಿ ಮೊತ್ತವನ್ನು ಪಾವತಿಸಿರುವುದಿಲ್ಲ ಹಾಗೂ ಮುಂದುವರೆಯುತ್ತಾ ದಿನಾಂಕ: 22-10-2018 ರಂದು ಮೆಸ್ಕಾಂ ಸಾಗರ ಉಪ-ವಿಭಾಗಕ್ಕೆ ಕೆಇಆರ್‌ಸಿ ನಿಯಮಗಳ ಅನ್ವಯ ದಂಡ ಪರಿಹಾರ ಕೋರಿ ಅರ್ಜಿಯನ್ನು ಸಲ್ಲಿಸಿರುತ್ತಾರೆ, ಆದರೆ ಮೆಸ್ಕಾಂ ಸಿಬ್ಬಂದಿಗಳು ಸದರಿ

ಅರ್ಜಿಯನ್ನು ಸ್ವೀಕರಿಸಲು ನಿರಾಕರಿಸಿರುತ್ತಾರೆ, ಹಾಗೂ ಅವರನ್ನು ವೈಯಕ್ತಿಕವಾಗಿ ನಿಂದಿಸಿರುತ್ತಾರೆ ಎಂದು ತಿಳಿಸಿದ್ದಾರೆ.

b) ಮುಂದುವರೆಯುತ್ತಾ ಮೇಲ್ಮನವಿದಾರರು ವಿದ್ಯುತ್ ಸಂಪರ್ಕವನ್ನು ರದ್ದತಿಗಾಗಿ ಅರ್ಜಿ ಕೊಟ್ಟ 358 ದಿನಗಳ ಕಾಲ ರದ್ದುಗೊಳಿಸಲು ವಿಳಂಬ ಮಾಡಿರುತ್ತಾರೆ ಹಾಗೂ ಕೆಇಆರ್‌ಸಿ ಎಸ್‌ಓಪಿ ನಿಯಮಗಳನ್ನು ಉಲ್ಲಂಘಿಸಿರುತ್ತಾರೆ ಎಂದು ತಿಳಿಸಿರುತ್ತಾರೆ. ಆದ್ದರಿಂದ ದೂರುದಾರರು ತಮ್ಮ ಸ್ಥಾವರವನ್ನು ಶಾಶ್ವತ ನಿಲುಗಡೆಗೊಳಿಸಲು ನೀಡಿದ ಅರ್ಜಿಯ ದಿನಾಂಕದಿಂದ 60 ದಿನಗಳನ್ನು ಕಳೆದು ನಂತರದ ಅವಧಿಗೆ ಅಂದರೆ ಠೇವಣಿ ಹಣವನ್ನು ಹಿಂತಿರುಗಿಸಿದ ದಿನಾಂಕದವರೆಗೆ ದಂಡ ಪರಿಹಾರದ ಮೊತ್ತವನ್ನು ನೀಡಬೇಕೆಂದು ಕೋರಿ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ.

5) ಪ್ರತಿವಾದಿ–2 ಇವರು ಗ್ರಾಹಕರ ಕುಂದು ಕೊರತೆಗಳ ನಿವಾರಣಾ ವೇದಿಕೆ, ಶಿವಮೊಗ್ಗ ಜಿಲ್ಲಾ ಆದೇಶ ದಿನಾಂಕ 05–02–2019ರಲ್ಲಿ ಈ ಕೆಳಕಂಡಂತೆ ಆದೇಶಿಸಿರುತ್ತಾರೆ:

"ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರತಿವಾದಿಗಳ ಕಾರ್ಯವೈಖರಿಯನ್ನು ಪ್ರಾರಂಭಿಸಿದಾಗ ಅರ್ಜಿದಾರರು ದಿನಾಂಕ: 24–10–2016 ರಂದೇ ತಮ್ಮ ಸ್ಥಾವರದ ಶಾಶ್ವತ ನಿಲುಗಡೆಗಾಗಿ ಅರ್ಜಿ ಕೊಟ್ಟಿದ್ದರೂ, ಸದರಿ ಸ್ಥಾವರಕ್ಕೆ ಸಂಬಂಧಿಸಿದಂತೆ, ಸಂಬಂಧಿಸಿದ ಶಾಖಾಧಿಕಾರಿಗಳು ದಿನಾಂಕ 10–11–2016 ರಂದು ಕ್ಷೇತ್ರ ವರದಿ ನೀಡಿದ್ದರೂ ಸದರಿ ಸ್ಥಾವರಕ್ಕೆ ಸಂಬಂಧಿಸಿದಂತೆ ಪ್ರತಿವಾದಿಗಳು ಬಾಕಿ ಇರುವ ಕಂದಾಯದ ಕುರಿತು ಅರ್ಜಿದಾರರಿಗೆ ಲಿಖಿತವಾಗಿ ಮಾಹಿತಿ ನೀಡಿ ಬಾಕಿ ಪಾವತಿಗೆ ಕ್ರಮ ಕೈಗೊಳ್ಳದೇ ಇರುವುದು ಕಂಡುಬಂದಿದೆ. ಅಲ್ಲದೆ, ಸದರಿ ಸ್ಥಾವರದ ಮಾಪಕವನ್ನು ಶಾಖಾಧಿಕಾಗಳು ಉಗ್ರಾಣಕ್ಕೆ ಹಿಂದಿರುಗಿಸದೇ ಇದ್ದರೂ ದಿನಾಂಕ 17–07–2017 ರಂದು ಸ್ಥಾವರದ ಶಾಶ್ವತ ನಿಲುಗಡೆ ಆದೇಶವನ್ನು ನೀಡಿರುತ್ತಾರೆ. ಈ ಪ್ರಕರಣದಲ್ಲಿ ಪ್ರತಿವಾದಿ ಕಛೇರಿಯ ಅಧಿಕಾರಿ/ನೌಕರರು ಸ್ಥಾವರಕ್ಕೆ ಸಂಬಂಧಿಸಿದ ಠೇವಣಿ ಹಣವನ್ನು ಅರ್ಜಿದಾರರಿಗೆ ಪಾವತಿಸುವಲ್ಲಿ ದೀರ್ಘಕಾಲದ ವಿಳಂಬ ಮಾಡಿರುವುದು ಕಂಡುಬಂದಿದೆ, ಅರ್ಜಿದಾರರು ಶಾಶ್ವತ ನಿಲುಗಡೆಗಾಗಿ ಅರ್ಜಿ ಕೊಟ್ಟ ದಿನಾಂಕದಿಂದ ಅರವತ್ತು ದಿನಗಳ ಒಳಗಾಗಿ ಸ್ಥಾವರವನ್ನು ಶಾಶ್ವತ ನಿಲುಗಡೆಗೊಳಿಸಿ, ಠೇವಣಿ ಹಣವನ್ನು ಅರ್ಜಿದಾರರಿಗೆ ಪಾವತಿಸಬಹುದಾಗಿತ್ತು. ಆದರೆ, ಈ ವಿಷಯದಲ್ಲಿ ಪ್ರತಿವಾದಿಗಳು ತಮ್ಮ ಕರ್ತವ್ಯದಲ್ಲಿ ನಿರ್ಲಕ್ಷ್ಯತನ ತೋರಿಸಿರುವುದು ಕಂಡುಬಂದಿದೆ.

ವೇದಿಕೆಯು ಮೇಲಿನ ಎಲ್ಲಾ ಅಂಶಗಳನ್ನು ಹಾಗೂ ಪ್ರಕರಣಕ್ಕೆ ಸಂಬಂಧಿಸಿದ ದಾಖಲೆಗಳನ್ನು ಮತ್ತು ಹೇಳಿಕೆಗಳನ್ನು ಕೂಲಂಕುಷವಾಗಿ ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಿದೆ.

1. ಅರ್ಜಿದಾರರ ದೂರು ಅರ್ಜಿಯನ್ನು ತಿರಸ್ಕೃತಗೊಳಿಸಿ ಆದೇಶ ನೀಡಲಾಗಿದೆ.
2. ಆದರೆ, ಪ್ರತಿವಾದಿಗಳು ಠೇವಣಿ ಹಣ ಪಾವತಿಸುವಲ್ಲಿ ನಿರ್ಲಕ್ಷ್ಯ ಮನೋಭಾವ ತೋರಿಸಿದ್ದರಿಂದ ಅರ್ಜಿದಾರರು ಸ್ಥಾವರದ ಶಾಶ್ವತ ನಿಲುಗಡೆಗೆ ಅರ್ಜಿ ಕೊಟ್ಟ ದಿನಾಂಕದಿಂದ ಅರವತ್ತು ದಿನಗಳ ನಂತರ ಅಂದರೆ ದಿ: 24-12-2016 ರಿಂದ ಠೇವಣಿ ಹಣ ಪಾವತಿಸಿದ ದಿನಾಂಕದವರೆಗೆ ಪ್ರತಿ ತಿಂಗಳಿಗೆ ಶೇ.1 ರಷ್ಟು ಬಡ್ಡಿ ಹಣವನ್ನು ಪ್ರತಿವಾದಿಗಳು ಅರ್ಜಿದಾರರಿಗೆ ಪಾವತಿಸುವಂತೆ ಆದೇಶಿಸಿದೆ.
3. ಠೇವಣಿ ಹಣದ ಮೇಲೆ ಪಾವತಿಸಬೇಕಾಗಿರುವ ಬಡ್ಡಿ ಹಣದ ಮೊತ್ತವನ್ನು ಠೇವಣಿ ಹಣವನ್ನು ಅರ್ಜಿದಾರರಿಗೆ ಸಕಾಲದಲ್ಲಿ ಪಾವತಿಸದೇ ವಿಳಂಬ ಮಾಡಿ ಕರ್ತವ್ಯ ಲೋಪವೆಸಗಿರುವ ಸಂಬಂಧಿಸಿದ ಅಧಿಕಾರಿ/ನೌಕರರ ವೇತನದಲ್ಲಿ ಕಡಿತಗೊಳಿಸಿ ಅರ್ಜಿದಾರರಿಗೆ ಪಾವತಿಸಲು ಆದೇಶಿಸಿದೆ".

6) ಮೇಲ್ಮನವಿ ಕುರಿತು ಪ್ರತಿವಾದಿ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ವಿ), ಸಾಗರ ಕಾ & ಪಾ ಉಪ-ವಿಭಾಗ, ಸಾಗರ ಇವರು ದಿನಾಂಕ 25-04-2019 ರಂದು ಈ ಕೆಳಕಂಡಂತೆ ಖಂಡಿಕೆವಾರು ಲಿಖಿತ ಹೇಳಿಕೆ ನೀಡಿರುತ್ತಾರೆ.

ಮೇಲ್ಮನವಿದಾರರು ಮೆಸ್ಕಾಂ ನಿಯಮಿತಕ್ಕೆ ಸೇರಿದ ವಿದ್ಯುತ್ ಸ್ಥಾವರ ಸಂಖ್ಯೆ: ಎಂಪಿ 37092 ವಿದ್ಯುತ್ ಸಂಪರ್ಕವನ್ನು ದಿನಾಂಕ 14-08-2014 ರಿಂದ ಪಡೆದುಕೊಂಡಿದ್ದು, ಇದರ ಸಲುವಾಗಿ ಠೇವಣಿ ಮೊತ್ತ ರೂ. 3,880/-ನ್ನು ಪಾವತಿಸಿದ್ದು ಹಾಗೂ ರೂ. 2,394/-ಗಳ ಮಾಪಕವನ್ನು ಸ್ವತ: ಖರೀದಿಸಿರುತ್ತಾರೆ. ಸದರಿ ವಿದ್ಯುತ್ ಸಂಪರ್ಕವನ್ನು ಖಾಯಂ ರದ್ದುಗೊಳಿಸಲು ಕೋರಿ ದಿನಾಂಕ 24-10-2016ರಂದು ಮೆಸ್ಕಾಂಗೆ ಅರ್ಜಿಯನ್ನು ಸಲ್ಲಿಸಿದ್ದು, ಸದರಿ ಅರ್ಜಿಯನ್ನು ದಿನಾಂಕ 27-10-2016 ರಂದು ಪಡೆದು ಕೂಡಲೇ ಸಹಾಯಕ ಇಂಜಿನಿಯರ್(ವಿ) ರವರಿಗೆ ಸ್ಥಳ ಪರಿವೀಕ್ಷಣೆ ಕೈಗೊಳ್ಳಲು ಸೂಚಿಸಿರುತ್ತಾರೆ. ಈ ಕುರಿತು ಪರಿಶೀಲಿಸಲಾಗಿ ಯಾವುದೇ ಸ್ಥಾವರವನ್ನು ಶಾಶ್ವತ ನಿಲುಗಡೆಗೊಳಿಸುವ ಮುನ್ನ ಸದರಿ ಸ್ಥಾವರಕ್ಕೆ ಸಂಬಂಧಿಸಿದಂತೆ ಯಾವುದೇ ರೀತಿಯ ಕಂದಾಯ ಬಾಕಿ ಇದ್ದಲ್ಲಿ ಸದರಿ ಮೊತ್ತವನ್ನು ಗ್ರಾಹಕರಿಂದ ಪಾವತಿಸಿಕೊಳ್ಳಬೇಕಾಗುತ್ತದೆ. ಅರ್ಜಿದಾರರು ಸ್ಥಾವರವನ್ನು ರದ್ದುಗೊಳಿಸುವ ಸಂದರ್ಭದಲ್ಲಿ ರೂ. 1,349/-ಕಂದಾಯ ಬಾಕಿ ಇರುವುದು ಕಂಡುಬಂದ ಮೇರೆಗೆ ಸದರಿ ಮೊತ್ತವನ್ನು ಅರ್ಜಿದಾರರಿಂದ ಬೇಡಿಕೆ ಮಾಡಿ ಪಾವತಿಸಿಕೊಳ್ಳಲಾಗಿದ್ದು, ಸದರಿ

ಮೇಲ್ಮನವಿದಾರರು ಸಂಪರ್ಕ ಠೇವಣಿ ಮೊತ್ತವನ್ನು ಹಿಂತಿರುಗಿಸುವ ಕುರಿತು ಯಾವುದೇ ಅರ್ಜಿಯನ್ನು ಸಲ್ಲಿಸಿರುವುದಿಲ್ಲ ಎಂದು ತಿಳಿಸಿರುತ್ತಾರೆ. ಸದರಿ ವಿದ್ಯುತ್ ಸಂಪರ್ಕವನ್ನು ಶಾಶ್ವತವಾಗಿ ರದ್ದುಗೊಳಿಸಿದ ನಂತರ ಠೇವಣಿ ಮೊತ್ತವನ್ನು ಹಿಂತಿರುಗಿಸುವ ಕುರಿತು ಕಾರ್ಯನಿರ್ವಾಹಕ ಇಂಜಿನಿಯರ್ (ವಿ) ರ ದಿನಾಂಕ 22-10-2018 ರ ಆದೇಶದನ್ವಯ ಸದರಿ ಪಾವತಿಸಿದ ಹಣವನ್ನು (ಭದ್ರತಾ ಸಂಪರ್ಕ ಠೇವಣಿ-ರೂ. 3880/- + ಮಾಪಕ ಭದ್ರತಾ ಠೇವಣಿ ಮೊತ್ತ ರೂ. 1,770/- ಒಟ್ಟು ರೂ. 5,650/-)ನ್ನು ಮೇಲ್ಮನವಿದಾರರಿಗೆ ದಿನಾಂಕ 25-10-2018 ರಂದು ಚೆಕ್ ಸಂಖ್ಯೆ 714376 ಮೂಲಕ ಹಿಂಪಾವತಿಸಲಾಗಿದೆ. ಮೇಲ್ಮನವಿದಾರರು ಸದರಿ ಮೊತ್ತವನ್ನು ಪಡೆದು, ಕೆಇಆರ್‌ಸಿ ನಿಯಮಗಳ ಅನ್ವಯ ದಂಡದ ಪರಿಹಾರ ಮೊತ್ತವನ್ನು ಕೊಡಿಸಿಕೊಡುವಂತೆ ಕೋರಿ ಸಿ.ಜಿ.ಆರ್.ಎಫ್, ಶಿವಮೊಗ್ಗ ಜಿಲ್ಲೆರವರ ಮುಂದೆ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಸಿ.ಜಿ.ಆರ್.ಎಫ್, ಶಿವಮೊಗ್ಗ ಜಿಲ್ಲೆರವರ ಆದೇಶ ದಿನಾಂಕ 05-02-2019ರಲ್ಲಿ ಅರ್ಜಿದಾರರ ಮನವಿಯನ್ನು ಪರಿಶೀಲಿಸಿ, ಅರ್ಜಿದಾರರು ಸ್ಥಾವರದ ಶಾಶ್ವತ ನಿಲುಗಡೆಗೆ ಅರ್ಜಿ ಕೊಟ್ಟ ದಿನಾಂಕದಿಂದ ಅರವತ್ತು ದಿನಗಳ ನಂತರ ಅಂದರೆ ದಿ: 24-12-2016 ರಿಂದ ಠೇವಣಿ ಹಣ ಪಾವತಿಸಿದ ದಿನಾಂಕದವರೆಗೆ ಪ್ರತಿ ತಿಂಗಳಿಗೆ ಶೇ.1 ರಷ್ಟು ಬಡ್ಡಿ ಹಣವನ್ನು ಪ್ರತಿವಾದಿಗಳು ಅರ್ಜಿದಾರರಿಗೆ ಪಾವತಿಸುವಂತೆ ಆದೇಶಿಸಿದೆ. ಈ ಸಂದರ್ಭದಲ್ಲಿ ಮೇಲ್ಮನವಿದಾರರು ತಮ್ಮ ಮೊತ್ತವನ್ನು ಪಡೆದುಕೊಂಡಿರುತ್ತಾರೆಂದು ಎಂದು ಪ್ರತಿವಾದಿಗಳು ತಿಳಿಸಿರುತ್ತಾರೆ. ಪ್ರತಿವಾದಿಗಳು ಮುಂದುವರೆದು ಮೇಲ್ಮನವಿದಾರರು ದಿನಾಂಕ 24-10-2016ರಂದು ಸ್ಥಾವರದ ಶಾಶ್ವತ ನಿಲುಗಡೆಗೆ ಮಾತ್ರ ಅರ್ಜಿಯನ್ನು ಸಲ್ಲಿಸಿದ್ದು ಠೇವಣಿ ಮೊತ್ತ ಮರುಪಾವತಿಗಾಗಿ ಅಗತ್ಯವಿರುವ ಅರ್ಜಿ ಹಾಗೂ ಠೇವಣಿ ಮಾಡಿರುವ ಮೊತ್ತದ ಮೂಲ ರಶೀದಿ ಸಲ್ಲಿಸಿರುವುದಿಲ್ಲ, ಆದಾಗ್ಯೂ, ಮೇಲ್ಮನವಿದಾರರಿಂದ ನಿಗದಿತ ಶುಲ್ಕ ರೂ. 1,349/-ನ್ನು ಬಾಕಿ ಇರುವುದರಿಂದ ಹಾಗೂ ಸದರಿ ಮೊತ್ತವನ್ನು ದಿನಾಂಕ 17-07-2017 ರಂದು ಪಾವತಿಸಿರುವುದರಿಂದ ದಿನಾಂಕ 17-10-2017 ರಂದು ಒಪ್ಪಂದದ ಮುಕ್ತಾಯ ಹಾಗೂ ಸ್ಥಾವರವನ್ನು ಶಾಶ್ವತ ನಿಲುಗಡೆಗೊಳಿಸಲಾಯಿತು, ಹೀಗಾಗಿ ಒಪ್ಪಂದದ ಮುಕ್ತಾಯವನ್ನು ಪ್ರಕ್ರಿಯಗೊಳಿಸುವಲ್ಲಿ ಹಾಗೂ ಸ್ಥಾವರವನ್ನು ಶಾಶ್ವತ ನಿಲುಗಡೆಗೊಳಿಸುವಲ್ಲಿ ಯಾವುದೇ ನಿರ್ಲಕ್ಷ್ಯತೆ ತೋರಿಸಿರುವುದಿಲ್ಲ ಹಾಗೂ ಮೇಲ್ಮನವಿದಾರರು ದಿನಾಂಕ 26-09-2018 ರಂದು ಠೇವಣಿ ಮೊತ್ತ ಮರುಪಾವತಿಗಾಗಿ ಅಗತ್ಯವಿರುವ ದಾಖಲೆಗಳನ್ನು ಲಗತ್ತಿಸಿ ತಮ್ಮ ಕಛೇರಿಯಲ್ಲಿ

ದೂರನ್ನು ಸಲ್ಲಿಸಿರುತ್ತಾರೆ, ಠೇವಣಿ ಮೊತ್ತ ಮರುಪಾವತಿಗಾಗಿ ಸಲ್ಲಿಸಿದ ಅರ್ಜಿಯನ್ನು ಪರಿಶೀಲಿಸಿ ಸಂಬಂಧಪಟ್ಟವರ ಅನುಮೋದನೆ ಪಡೆದು ನಿಗದಿಪಡಿಸಿದ 60 ದಿನಗಳ ಒಳಗಾಗಿ ಅವರಿಗೆ ಚೆಕ್ ಮೂಲಕ ಹಣ ಮರುಪಾವತಿ ಮಾಡಲಾಗಿದೆ, ಆದ್ದರಿಂದ ಮೇಲ್ಮನವಿದಾರರು ಯಾವುದೇ ಪರಿಹಾರಕ್ಕೆ ಅರ್ಹರಿರುವುದಿಲ್ಲ, ಆದ್ದರಿಂದ ಮೇಲ್ಮನವಿದಾರರು ಸಲ್ಲಿಸಿರುವ ಮೇಲ್ಮನವಿಯನ್ನು ರದ್ದುಗೊಳಿಸಬೇಕೆಂದು ಪ್ರಾರ್ಥಿಸಿಕೊಂಡಿರುತ್ತಾರೆ.

7) ಉಭಯ ಪಕ್ಷದವರು ಸಲ್ಲಿಸಿರುವ ಎಲ್ಲಾ ದಾಖಲಾತಿಗಳನ್ನು, ವಾದವಿವಾದಗಳನ್ನು ಕೂಲಂಕುಶವಾಗಿ ಪರಿಶೀಲಿಸಿದ ನಂತರ ಪರಿಗಣನೆಗೆ ಉದ್ಭವವಾಗುವ ಅಂಶಗಳೇನೆಂದರೆ:

a) ಮೇಲ್ಮನವಿದಾರರು KERC (Standards of Performance) Regulations, 2004 ರ ಪ್ರಕಾರ ಠೇವಣಿ ಮರುಪಾವತಿಗೆ ವಿಳಂಬ ಮಾಡಿರುತ್ತಾರೆಯೆ?

b) ಮೇಲ್ಮನವಿದಾರರು KERC (Standards of Performance) Regulations, 2004 Schedule-I ಕ್ರಮ ಸಂಖ್ಯೆ 14 ರ ಪ್ರಕಾರ ನಿಗದಿತ ಅವಧಿಗಿಂತ ವಿಳಂಬವಾದ ಅವಧಿಗೆ ಪರಿಹಾರಕ್ಕಾಗಿ ಅರ್ಹರಿರುತ್ತಾರೆಯೆ?

8) ಮೇಲಿನ ಅಂಶಗಳ ಕುರಿತು ನನ್ನ ನಿರ್ಣಯ ಈ ಕೆಳಕಂಡಂತೆ ಇರುತ್ತದೆ.

ಅ) ವಿಳಂಬವಾಗಿರುವುದಿಲ್ಲ;

ಆ) ಮೇಲ್ಮನವಿದಾರರು ಪರಿಹಾರಕ್ಕಾಗಿ ಅರ್ಹರುವುದಿಲ್ಲ.

**<u>ಕಾರಣಗಳು</u>**: ದಿನಾಂಕ 24-10-2016ರಂದು ಮೇಲ್ಮನವಿದಾರರು ತಾವು ಪಡೆದುಕೊಂಡಿದ್ದ ವಿದ್ಯುತ್ ಸಂಪರ್ಕವನ್ನು ಖಾಯಂ ರದ್ದುಗೊಳಿಸಲು ಕೋರಿ ಪ್ರತಿವಾದಿಗೆ ಅರ್ಜಿ ಕೊಟ್ಟಿರುತ್ತಾರೆ. ಸದರಿ ಅರ್ಜಿಯಲ್ಲಿ ತಾವು ನೀಡಿರುವ ಠೇವಣಿ ಮರುಪಾವತಿಸುವ ಬಗ್ಗೆ ಚಕಾರ ಎತ್ತಿರುವುದಿಲ್ಲ ಹಾಗೂ ಠೇವಣಿ ನೀಡಿದ ಮೂಲ ರಸೀದಿಯನ್ನು ನೀಡಿರುವುದಿಲ್ಲ. ವಿದ್ಯುತ್ ಸಂಪರ್ಕವನ್ನು ರದ್ದುಗೊಳಿಸಲು ಕೋರಿ ಸಲ್ಲಿಸಿದ್ದ ಅರ್ಜಿಯನ್ನು ಪರಿಶೀಲಿಸಿ ಸ್ಥಳ ತನಿಖೆ ಮಾಡಿ ಸಂಬಂಧಪಟ್ಟವರ ಅನುಮೋದನೆ ಪಡೆದು ಬಾಕಿ ಇರುವ ವಿದ್ಯುತ್ ಶುಲ್ಕ ಹಾಗೂ ಸ್ಥಿರ ಶುಲ್ಕ ರೂ. 1,359/- ಗಳನ್ನು ಕಟ್ಟಿಸಿಕೊಂಡು ದಿನಾಂಕ 17-10-2017ರಂದು ಪ್ರತಿವಾದಿಯು ವಿದ್ಯುತ್ ಸಂಪರ್ಕವನ್ನು ಖಾಯಂ ಆಗಿ ರದ್ದುಗೊಳಿಸಿರುತ್ತಾರೆ. KERC (Standards of Performance) Regulations, 2004 Schedule-I ರಲ್ಲಿ ವಿದ್ಯುತ್ ಸಂಪರ್ಕ ಸ್ಥಗಿತಗೊಳಿಸುವ ಕುರಿತು ಯಾವುದೇ ಕಾಲಮಿತಿ ಹಾಗೂ ವಿಳಂಬವಾದದಲ್ಲಿ ನೀಡಬೇಕಾದ

ಪರಿಹಾರ ನಿಗದಿಪಡಿಸಿರುವುದಿಲ್ಲ. ಆದರೆ, ಗ್ರಾಹಕರು ನೀಡಿರುವ ಠೇವಣಿಯನ್ನು ಮರುಪಾವತಿಸುವ ಕುರಿತು ಕಾಲಮಿತಿ ಹಾಗೂ ವಿಳಂಬವಾದಲ್ಲಿ ನೀಡಬೇಕಾದ ಪರಿಹಾರದ ಬಗ್ಗೆ ಅವಕಾಶ ಕಲ್ಪಿಸಲಾಗಿದೆ, ಸದರಿ ಕಾಯ್ದೆಯ ಉದ್ಧೃತ ಭಾಗ ಈ ಕೆಳಕಂಡಂತೆ ಇರುತ್ತದೆ:

| Nature of Service | Standards of Performance (Indicative Maximum time limit for rendering service) | Amount payable to affected consumer |
|---|---|---|
| 14. **Refund of Deposits** | Within 60 days **after receipt of request** | Rs 50/- for each day of delay |

ಮೇಲ್ಮನವಿದಾರರು ಠೇವಣಿಯನ್ನು ಮರುಪಾವತಿಸಲು ಕೋರಿ ಅರ್ಜಿಯನ್ನು ದಿನಾಂಕ 26–09–2018ರಂದು ಸಲ್ಲಿಸಿರುತ್ತಾರೆ. ಪ್ರತಿವಾದಿಯವರು ಮೇಲ್ಮನವಿದಾರರಿಗೆ ದಿನಾಂಕ 25–10–2018 ರಂದು ಠೇವಣಿಯನ್ನು ಮರುಪಾವತಿಸಿರುತ್ತಾರೆ. ಠೇವಣಿಯನ್ನು ಮರುಪಾವತಿಸಲು ಕಾನೂನಿನಲ್ಲಿ ನಿಗದಿಪಡಿಸಿದ 60 ದಿನಗಳ ಒಳಗಾಗಿ ಪ್ರತಿವಾದಿಯವರು ಮರುಪಾವತಿಸಿರುವ ಕಾರಣ ಮೇಲ್ಮನವಿದಾರರಿಗೆ ಯಾವುದೇ ಪರಿಹಾರವನ್ನು ನೀಡಲು ಅವಕಾಶ ಇರುವುದಿಲ್ಲ.

ಮೇಲ್ಮನವಿದಾರರು ತಾವು ವಿದ್ಯುತ್ ಸಂಪರ್ಕ ರದ್ದತಿಗಾಗಿ ಅರ್ಜಿ ಕೊಟ್ಟ 358 ದಿನಗಳ ನಂತರ ಪ್ರತಿವಾದಿಯು ರದ್ದುಗೊಳಿಸಿದ್ದಾರೆ, ಪ್ರತಿವಾದಿಯು ವಿಳಂಬ ಮಾಡಿ KERC (Standards of Performance) Regulations, 2004 ನಿಯಮಗಳನ್ನು ಉಲ್ಲಂಘಿಸಿದ್ದಾರೆ ಹಾಗೂ Standards of Performance (SoP) ನಿಯಮಗಳಂತೆ ತಮ್ಮ ವಿದ್ಯುತ್ ಸಂಪರ್ಕವನ್ನು 60 ದಿನಗಳಲ್ಲಿ ರದ್ದುಗೊಳಿಸಬೇಕಿತ್ತು ಎನ್ನುವ ವಾದವನ್ನು ಈಗಿರುವ ಕಾನೂನಿನ ಚೌಕಟ್ಟಿನ ಅಡಿಯಲ್ಲಿ ಒಪ್ಪಲು ಬರುವುದಿಲ್ಲ.

9) ಮೇಲ್ಕಾಣಿಸಿದ ಕಾರಣಗಳ ಹಿನ್ನೆಲೆಯಲ್ಲಿ ಈ ಕೆಳಕಂಡಂತೆ ಆದೇಶ ಮಾಡಲಾಗಿದೆ:

**ಸಂಖ್ಯೆ:ಒಎಂಬಿ/ಎಂ/ಜಿ–324/2018/ಡಿ–1310** **ದಿನಾಂಕ: 05–07–2019**

**ಆದೇಶ**

1) ಮೇಲ್ಮನವಿದಾರರು ಠೇವಣಿ ಮರುಪಾವತಿಸುವ ಕುರಿತು ಪ್ರತಿವಾದಿಯಿಂದ ಆಗಿದೆ ಎನ್ನಲಾದ ವಿಳಂಬದ ಕುರಿತು ಪರಿಹಾರ ಕೋರಿ ಸಲ್ಲಿಸಿದ್ದ ಮೇಲ್ಮನವಿಯನ್ನು ವಜಾಗೊಳಿಸಿದೆ.

2) ಮೇಲ್ಮನವಿದಾರರು ದಿನಾಂಕ 22–10–2018 ರಂದು ಮೆಸ್ಕಾಂ, ಸಾಗರ ಉಪ ವಿಭಾಗಕ್ಕೆ KERC ನಿಯಮಗಳನ್ವಯ ಪರಿಹಾರ ಕೇಳಿ ಅರ್ಜಿ ಕೊಡಲು ಹೋದಾಗ ಅಲ್ಲಿದ್ದ ಗಾಮಪ್ಪ ಎಂಬ ಮೆಸ್ಕಾಂ ನೌಕರರು ತಮ್ಮ ಅರ್ಜಿಯನ್ನು ಸ್ವೀಕರಿಸಲು ನಿರಾಕರಿಸಿ ಅವರನ್ನು ವೈಯಕ್ತಿಕವಾಗಿ ನಿಂದಿಸಿರುತ್ತಾರೆ ಎಂದು ದೂರಿರುವ ಕುರಿತು ಪ್ರತಿವಾದಿಯು ಸೂಕ್ತ ವಿಚಾರಣೆ ಕೈಗೊಂಡು ನೌಕರರು ತಪ್ಪು ಮಾಡಿದ್ದಲ್ಲಿ ಅವರ ಮೇಲೆ ಸೂಕ್ತ ಶಿಸ್ತಿನ ಕ್ರಮ ಕೈಗೊಳ್ಳಲು ಸೂಚಿಸಿದೆ.

ಸಹಿ/–
**(ಎಸ್.ಎಸ್.ಪಟ್ಟಣಶೆಟ್ಟಿ)**
ವಿದ್ಯುಚ್ಛಕ್ತಿ ಲೋಕಪಾಲರು

1) ಶ್ರೀ ಶರತ್ ಎಂ.ಎಲ್
ಮನೇಘಟ್ಟ,
ಅಂಚೆ: ಮಾಸೂರು, ತಾ: ಸಾಗರ,
ಶಿವಮೊಗ್ಗ ಜಿಲ್ಲೆ.
2) ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)
ಕಾರ್ಯ ಮತ್ತು ಪಾಲನಾ ಸಾಗರ ಗ್ರಾಮಾಂತರ ಉಪವಿಭಾಗ,
ಮೆಸ್ಕಾಂ, ಸಾಗರ–577401,
ಶಿವಮೊಗ್ಗ ಜಿಲ್ಲೆ.
3) ಅಧ್ಯಕ್ಷರು, ಸಿಜಿಆರ್‌ಎಫ್/ಅಧೀಕ್ಷಕ ಇಂಜಿನಿಯರ್(ವಿ.)
ಕಾ & ಪಾ ಶಿವಮೊಗ್ಗ ವೃತ್ತ, ಮೆಸ್ಕಾಂ,
ಶಿವಮೊಗ್ಗ.
4) ಮಾನ್ಯ ಅಧ್ಯಕ್ಷರು ರವರ ಆಪ್ತ ಕಾರ್ಯದರ್ಶಿ, ಕವಿನಿಆ.
5) ಮಾನ್ಯ ಸದಸ್ಯರು (ಎಂ)ರವರ ಆಪ್ತ ಕಾರ್ಯದರ್ಶಿ, ಕವಿನಿಆ.
6) ಮಾನ್ಯ ಸದಸ್ಯರು (ಆರ್)ರವರ ಆಪ್ತ ಕಾರ್ಯದರ್ಶಿ, ಕವಿನಿಆ.
7) ಮಾನ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಕವಿನಿಆ.
8) ರಾಜ್ಯದ ಎಲ್ಲಾ ಸಿಜಿಆರ್‌ಎಫ್‌ನ ಅಧ್ಯಕ್ಷರುಗಳಿಗೆ.